**ದಿನಾಂಕ 15.10.2022 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀಸವಾಲುಃ ಶ್ರೀ ಹೆಚ್ ಎನ್ ವಕೀಲರಿಂದಃ**

**ದಿಃ** 14.06.1987 **ನನ್ನ ಜನ್ಮ ದಿನಾಂಕ. ನನ್ನ ತಂದೆ ಹೆಸರು ಮಲ್ಲೇಶಪ್ಪ. ಮಲ್ಲೇಶಪ್ಪನ ತಾಯಿ ಹೆಸರು ಚಿಕ್ಕರಂಗಮ್ಮ. ಚಿಕ್ಕರಂಗಮ್ಮನಿಗೆ ವಾದಿ ಲಕ್ಷಮ್ಮಕ್ಕ ತಂಗಿ ಎಂದರೆ ಸರಿ. ವಾದಿ ಲಕ್ಷ್ಮಕ್ಕ ನಮ್ಮ ಊರಿನವರು ಎಂದರೆ ಸರಿಯಲ್ಲ. ಅವರನ್ನು ಕಡವಿಗೆರೆಗೆ ಮದುವೆ ಮಾಡಿಕೊಡಲಾಗಿದೆ. ಗಿಡ್ಡಬೊಮ್ಮನಹಳ್ಳಿಯನ್ನು ಅರಸನಪುರ ಎಂದು ಕರೆಯುತ್ತಾರೆ ಎಂದರೆ ಸರಿ. ಮೂಲ ಪುರುಷ ಚಿಕ್ಕೀರಪ್ಪ ಮತ್ತು ಅವರ ಹೆಂಡತಿಯನ್ನು ನೋಡಿಲ್ಲ. ನನ್ನ ಅಜ್ಜಿ ನೋಡಿದ್ದಾರೆ. ವಾದಿ ಲಕ್ಷ್ಮಕ್ಕ ಅವರ ಜೊತೆ ನೊಟೀಸ್ ಕೊಡಲು ಅಥವಾ ದಾವೆಗೆ ಮಾಹಿತಿಯನ್ನು ಕೊಡುವ ಸಲುವಾಗಿ ಹೋಗಿದ್ದೇನೆ.** 03.05.2019 **ರಲ್ಲಿ** 2 **ಆಸ್ತಿಗಳಿಗೆ ಸಂಬಂಧಿಸಿದಂತೆ ನೋಟೀಸ್ ಕೊಡಲಾಗಿದೆ. ಅವುಗಳು ಸ.ನಂ.** 27/3 **ಮತ್ತು** 74/2 **ಎ ಆಸ್ತಿಗಳಾಗಿವೆ. ದಾವೆಯನ್ನು ಸ.ನಂ.** 27/3 **ಮತ್ತು** 74/2 **ಎ ಸ್ವತ್ತಿಗೆ ತರಲಾಗಿದೆ. ಕಡವಿಗೆರೆಗೆ ನಾನು ಬಂದು ಹೋಗಿ ಮಾಡುತ್ತಿದ್ದೆ. ಅಲ್ಲಿಯೇ ವಾಸವಾಗಿರಲಿಲ್ಲ. ವಾದಿಯವರ ಕುಟುಂಬಕ್ಕೆ ಆಸ್ತಿಗಳು ತಾತನ ಮೂಲಕ ಬಂದಿವೆ. ಸ.ನಂ.** 74/2 **ರಲ್ಲಿ** 36 **ಗುಂಟೆ ಇದ್ದು** 2 **ಗುಂಟೆ ಎನ್ ಎಚ್ ರಸ್ತೆಗೆ ಹೋಗಿದ್ದು ಮತ್ತೆ** 9 **ಗುಂಟೆಯನ್ನು ಎನ್ ಹೆಚ್ ರಸ್ತೆಗೆ ತೆಗೆದುಕೊಳ್ಳಲಾಗಿದೆ.** 2 **ಗುಂಟೆ ಯನ್ನು ಎನ್ ಎಚ್ ರಸ್ತೆಗೆ ಹೋಗಿದ್ದು ಅದರ ನಿಖರ ದಿನಾಂಕ ಗೊತ್ತಿಲ್ಲ.** 9 **ಗುಂಟೆ ಯನ್ನು ಎನ್ ಎಚ್ ರಸ್ತೆಗೆ ಹೋಗಿದ್ದು ಅದರ ನಿಖರ ದಿನಾಂಕ ಗೊತ್ತಿಲ್ಲ ಎಂದು ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ. ಸ ನಂ** 74/2 **ರ ಆಸ್ತಿ ಎಷ್ಟು ಪೋಡಾಗಿದೆ ಎಂದರೆ ಸಾಕ್ಷಿಯು** 4 **ಭಾಗಗಾಳಾಗಿವೆ ಎಂದು ನುಡಿಯುತ್ತಾರೆ.**

2. **ದಾವಾ ಆಸ್ತಿಯ ಚೆಕ್ ಬಂದಿಯನ್ನು ನನ್ನ ಅಜ್ಜಿ ಬರೆಸಿದ್ದಾರೆ. ನನಗೆ ಸ್ವಲ್ಪ ಗೊತ್ತಿದೆ. ಸ ನಂ.** 74/2 **ರ ಐಟಂ ನಂ.**1 **ರ ಪೂರ್ವಕ್ಕೆ ಚಿಕ್ಕೀರಪ್ಪ, ಪಶ್ಚಿಮಕ್ಕೆ ಎನ್ ಎಚ್ ರಸ್ತೆ, ಉತ್ತರಕ್ಕೆ ಕಡವಿಗೆರೆ, ದಕ್ಷಿಣಕ್ಕೆ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವಕ್ಕೆ ನಂಜುಂಡಪ್ಪ ಎಂದು ಬರೆಸಲಾಗಿದೆ**

ಎಂದರೆ ಅದು ಸಂಪೂರ್ಣ ನಂಜುಂಡಪ್ಪ ಬರುತ್ತಾರೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಚಿಕ್ಕೀರಪ್ಪ ಎಂದು ಬರೆಯಲಾಗಿದೆ ಎಂದರೆ ಆ ಸಮಯಕ್ಕೆ ಬರೆಯಲಾಗಿದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ಹಂಪಣ್ಣನ ಜಮೀನು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯು ರಸ್ತೆ ಕೂಡ ಅದೇ ದಾರಿಯಲ್ಲಿ ಹೋಗುತ್ತದೆ ಎಂದು ನುಡಿಯುತ್ತಾರೆ. ಉತ್ತರಕ್ಕೆ ಗಂಗಣ್ಣನವರ ಜಮೀನು ಬರುತ್ತದೆ ಹಂಪಣ್ಣನವರ ಜಮೀನು ಬರುತ್ತದೆ ಎಂದರೆ ಅದರ ಬಗ್ಗೆ ಅಷ್ಟಾಗಿ ಗೊ ತ್ತಿಲ್ಲ.

3. ಸ.ನಂ 27/3 ಐಟಂ ನಂ.2 ರ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಗೊತ್ತಿಲ್ಲ, ಉತ್ತರಕ್ಕೆ ಗೊತ್ತಿಲ್ಲ, ದಕ್ಷಿಣಕ್ಕೆ ಗಂಗಣ್ಣ ಬರುತ್ತಾರೆ. ದಾವಾ ಆಸ್ತಿ ಬಗ್ಗೆ ಹಾಗೂ ಚಿಕ್ಕೀರಪ್ಪ ಅವರ ಕುಟುಂಬದ ಬಗ್ಗೆ ಪೂರ್ಣವಾಗಿ ತಿಳಿದುಕೊಂಡಿಲ್ಲ ಆದರೆ ಸ್ವಲ್ಪ ತಿಳಿದುಕೊಂಡಿದ್ದೇನೆ ಎಂದು ನುಡಿಯುತ್ತಾರೆ. ವಾದಿ ಲಕ್ಷ್ಮಮ್ಮ ಅವರ ಗಂಡ ಫವತಿ ಆದ ನಂತರ ಗಿಡ್ಡಬೊಮ್ಮನಹಳ್ಳಿಯಲ್ಲಿ ವಾಸವಿದ್ದು ನಮ್ಮ ಹಳ್ಳಿಯಲ್ಲಿ ವಾಸವಿಲ್ಲ ಎಂದರೆ ಸಾಕ್ಷಿಯು ನಮ್ಮ ಅಜ್ಜಿಯು ಈಗಲೂ ಕಡವಿಗೆರಯಲ್ಲಿ ವಾಸವಿದ್ದಾರೆ ಎಂದು ನುಡಿಯುತ್ತಾರೆ. ವಾದಿ ಲಕ್ಷಮ್ಮ ಅವರು ನ್ಯಾಯಾಲಯಕ್ಕೆ ಬರಲು ಯಾವುದೇ ತೊಂದರೆ ಇಲ್ಲ ಎಂದರೆ ಅದಕ್ಕೆ ಸಾಕ್ಷಿಯು ಉಷಾರಿಲ್ಲ ಎಂದು ನುಡಿಯುತ್ತಾರೆ. ಅವರಿಗೆ ಓಡಾಡಲು ಸಾಧ್ಯವಿಲ್ಲ. ಕಾಲು ಸರಿಯಿಲ್ಲ. ಓಡಾಡಲು ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.

4. ವಾದಿ ಲಕ್ಷ್ಮಮ್ಮನವರ ಗಂಡ ಜೀವಂತ ಇದ್ದಾಗಲೂ ಮನೆಯ ಎಜಮಾನಿಕೆಯನ್ನು ಅವರೇ ಮಾಡುತ್ತಿದ್ದರು ಎಂದರೆ ನಮ್ಮ ತಾತ ಮಾಡುತ್ತಿದ್ದರು. ವಾದಿಗೆ ನ್ಯಾಯಾಲಯದ ವ್ಯವಾಹಾರಿಕ ಹಾಗೂ ಪ್ರಾಪಂಚಿಕ ಜ್ಞಾನ ಇದೆ ಎಂದರೆ ಸರಿ. ವಾದಿಗೆ ಮಲ್ಲಣ್ಣನ ಮಕ್ಕಳಾದ 1 ರಿಂದ 3 ಜನ ಮಕ್ಕಳ ಮೇಲೆ ದ್ವೇಷ ಇದೆ ಎಂದರೆ ಸರಿಯಲ್ಲ. ಭಾಗ ಕೊಟ್ಟಿಲ್ಲ ಎಂದು ನ್ಯಾಯಾಲಯಕ್ಕೆ ಕೇಸ್ ಹಾಕಿದ್ದಾರೆ. ಓ ಎಸ್ 175/1988 ರಲ್ಲಿ ಸ.ನಂ. 24/2 ಎ, 74/2 ಎ ಆಸ್ತಿಯ ಚೆಕ್ ಬಂದಿಯನ್ನು ಕೊಟ್ಟಿದ್ದು ಅದನ್ನು ನಾನು ತಿಳಿದುಕೊಂಡಿದ್ದೇನೆ. ನಾನು ಈ ಮೇಲೆ ತಿಳಿಸಿದ ಚೆಕ್ ಬಂದಿಯೇ ಆಗಿದೆ. ಸ.ನಂ.74/2 ರಲ್ಲಿ ಈ ಮೇಲೆ ತಿಳಿಸಿದಂತೆ ಉತ್ತಾರರ್ಧ ಭಾಗವನ್ನು ವಾದಿ ಲಕ್ಷ್ಮಮ್ಮ ಕೇಳಿದ್ದಾರೆ ಎಂದರೆ ಅವರು ಉತ್ತರ ದಕ್ಷಿಣವಾಗಿ ಭಾಗವನ್ನು ಕೇಳಿದ್ದಾರೆ. ವಾದಿ ಲಕ್ಷಮ್ಮ ಅವರಿಗೆ

ವ್ಯವಹಾರ ಜ್ಞಾನ ಚೆನ್ನಾಗಿದ್ದ ಕಾರಣ ಅವರು ಉತ್ತರಾರ್ದ ಭಾಗ ಕೇಳಿದ್ದಾರೆ ಎಂದರೆ ಸರಿಯಲ್ಲ. ರಸ್ತೆ ಕಡೆ ಬರುವ ಜಮೀನುನ್ನು ಒತ್ತಾಯ ಮಾಡಿ ರಾಜಿ ಅರ್ಜಿಯಲ್ಲಿ ತಮ್ಮ ಕಡೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾದಿಗೂ 17 ಗುಂಟೆ ಪ್ರತಿವಾದಿಗೂ 17 ಗುಂಟೆ ಯಂತೆ ರಾಜಿ ಅರ್ಜಿಯಂತೆ ಬಂದಿದೆ. ಸಾಕ್ಷಿಯು ಮುಂದುವರೆದು ರಸ್ತೆಗೆ ಸ್ವಾಧೀನಗೊಂಡ ಜಮೀನನ್ನು ಜಮೀನಿನನ ಹಣವನ್ನೆಲ್ಲ ಪಡೆದುಕೊಂಡು ರಸ್ತೆಯ ಜಾಗವನ್ನು ತಪ್ಪು ಚೆಕ್ಕುಬಂದಿ ಹಾಕಿ ನಮ್ಮ ಅಜ್ಜಿಗೆ ಕೊಟ್ಟಿದ್ದಾರೆ ಎಂದು ನುಡಿಯುತ್ತಾರಿ. ಸದರಿ ವಿಚಾರ ಎಫ್ ಡಿ ಪಿ ಕೇಸಿನಲ್ಲಿ ಸರ್ವೇಯರ್ ಅಳತೆ ಮಾಡಲು ಬಂದಾಗ ಗೊತ್ತಾಗಿದೆ. ಎಫ್ ಡಿ ಪಿ ಪ್ರಕಾರವೇ ಪ್ರತ್ಯೇಕ ಪ್ರತ್ಯೇಕ ಖಾತೆಯಗಿದೆ ಎಂದರೆ ಸರಿ. ಉಳಿದ ಸರ್ವೆ ಜಮೀನು ಅಳತೆ ಮಾಡಲಿ ಎಂದು ನಾವು ಸುಮ್ಮನಾಗಿದ್ದೇವೆ. ಎಫ್ ಡಿ ಪಿ ಪ್ರಕಾರವೇ ಖಾತೆ ಪಹಣಿ ಆಗಿದ್ದು ಅದರಂತೆ ಜಮೀನು ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಅಳತೆ ಮಾಡಿದಾಗ ರಸ್ತೆಗೆ ಹೋಗಿದೆ ಎಂದು ತಿಳಿಸಿದ್ದು ನಮಗೆ 6 ಗುಂಟೆ ಮಾತ್ರ ಉಳಿದಿದ್ದು ರಸ್ತೆಗೆ ಹೋದ ಜಮೀನನ್ನು ಪ್ರತಿವಾದಿಯೇ ತೆಗೆದುಕೊಂಡಿದ್ದಾರೆ. ವಿಚಾರ ತಿಳಿದ ನಂತರ ಖಾತೆ ಪಹಣಿ ಪ್ರಶ್ನೆ ಮಾಡಿದ್ದೀರ ಎಂದರೆ ಮತ್ತೆ ನ್ಯಾಯಾಲಯಕ್ಕೆ ಹೋಗುವುದು ಬೇಡ ಎಂದು ವಿಚಾರಿಸಿದ್ದು ಉಳಿದ ಜಮೀನಿನಲ್ಲಾದ್ದರೂ 17 ಗುಂಟೆ ಕೊಡಲು ಕೇಳಿದ್ದಕ್ಕೆ ಅವರು ಆಗುವುದಿಲ್ಲ ಎಂದು ಹೇಳಿದ್ದಕ್ಕೆ ನ್ಯಾಯಾಲಯಕ್ಕೆ ಬಂದಿದ್ದೇವೆ. ಆ ರೀತಿ ಪ್ರತಿವಾದಿಗಳು ನಾನು ಮತ್ತು ನನ್ನ ತಂದೆ ವಾದಿ ಲಕ್ಷ್ಮಮ್ಮ ಹಾಗೂ ಊರಿನ ಹಿರಿಯರನ್ನು ಕರೆದುಕೊಂಡು ಹೋಗಿ ಕೇಳಿರುತ್ತೇವೆ. ಆದರೆ ಪ್ರತಿವಾದಿಗಳು ಒಪ್ಪಿರುವುದಿಲ್ಲ. ದಾವೆ ಸಲ್ಲಿಸುವ 1 ವರ್ಷ ಮುಂಚೆ ಕೇಳಿದ್ದೆವು.

5. ಕಳೆದ 30 ವರ್ಷಗಳಿಂದ ಅದರಲ್ಲಿ ಮನೆ ಕಟ್ಟಿಕೊಂಡು ಪ್ರತಿವಾದಿಗಳು ಅವರ ಕುಟುಂಬದವರು ಐಟಂ ನಂ 1 ರಲ್ಲಿ 17 ಗುಂಟೆ ಜಮೀನು ಪೂರ್ವಕ್ಕೆ ಗೋವಿಂದಪ್ಪ ಮತ್ತು ರಂಗಪ್ಪ ಪಶ್ಚಿಮಃ ವಾದಿ ಲಕ್ಷ್ಕ್ಕ ಹಿಸ್ಸಾ ಜಮೀನು, ಉತ್ತರಕ್ಕೆ ಕಡವಿಗೆರೆಯಿಂದ ದೊಡ್ಡಗುಳ ಕ್ಕೆ ರಸ್ತೆ, ದಕ್ಷಿಣಕ್ಕೆ ಃ ಗಂಗಣ್ಣ ಬಿನ್ ತೋಟದಪ್ಪ, ರಂತೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ.

ಮನೆ ಕಟ್ಟಿರುವುದು ನಿಜ. ನ್ಯಾಯಾಲಯದಲ್ಲಿ ಕೇಸು ನಡೆಯುವಾಗಲೇ ಕಟ್ಟಿದ್ದಾರೆ ಎಂದು ನುಡಿಯುತ್ತಾರೆ.

**ಮುಂದುವರೆದ** ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**